ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ರೂ. 76.75 ಲಕ್ಷಗಳು

ಆ) ಲಕ್ಕವಳ್ಳಿ ವನ್ಯಜೀವಿ ವಲಯ ರೂ. 29.64 ಲಕ್ಷಗಳು ತಣಿಗೆಬೈಲು ವನ್ಯಜೀವಿ ವಲಯ ರೂ. 9.29 ಲಕ್ಷಗಳು.

ತರೀಕೆರೆ ತಾಲ್ಲೂಕಿನ ನಬಾರ್ಡ್ ರಸ್ತೆಗಳು

1981(2353) - ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತರೀಕೆರೆ ತಾಲ್ಲೂಕಿನಲ್ಲಿ ಕಳೆದ ಮೂರು ಸಾಲುಗಳಲ್ಲಿ ನಬಾರ್ಡ್ ಯೋಜನೆಯಲ್ಲಿ ಎಷ್ಟು ಕಿ.ಮೀ. ರಸ್ತೆ ಹಾಗೂ ಎಷ್ಟು ಸೇತುವೆ ನಿರ್ಮಾಣ ಮಾಡಲಾಗಿದೆ.

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕಿನಲ್ಲಿ 1999-2000, 2000-2001 ಮತ್ತು 2001-2002ನೇ ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಯಡಿ 25.10 ಕಿಮೀ ಗ್ರಾಮೀಣ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸಿ ಡಾಂಬರು ಮಾಡಲಾಗಿದೆ. ಹಾಗೂ 24.26 ಕಿಮೀ ಉದ್ದದ ರಸ್ತೆ ಅಭಿವೃದ್ಧಿ ಕೆಲಸ ಪ್ರಗತಿಯಲ್ಲಿದೆ. ಇದಲ್ಲದೆ, ಒಂದು ಸೇತುವೆ ಅಗಲೀಕರಣವನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ.

ಪರ್ಯಾಯ ವ್ಯವಸ್ಥೆಗೊಳಪಟ್ಟ ರಾಜ್ಯ ಹೆದ್ದಾರಿ ಪ್ರದೇಶದ ಸಮಸ್ಯೆಗಳು

1982(2425) - ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿ-48ರ ಪಾಣೆಮಂಗಳೂರು ಸೇತುವೆಯು ಬಿರುಕು ಬಿಟ್ಟಿರುವುದರಿಂದ ಮಾಡಲಾದ ಪರ್ಯಾಯ ವ್ಯವಸ್ಥೆಯ ಕಾರಣದಿಂದಾಗಿ ಕಡೂರು-ಬಂಟ್ವಳ ರಸ್ತೆ, ಸುಬ್ರಮಣ್ಯ-ಧರ್ಮಸ್ಥಳ ಉಡುಪಿ ರಸ್ತೆ, ಉಪ್ಪಿನಂಗಡಿ-ಗುರುವಾಯನಕೆರೆ ರಸ್ತೆ - ರಾಜ್ಯ ಹೆದ್ದಾರಿಗಳು ಭಾರಿ ವಾಹನಗಳ ಸಂಚಾರದಿಂದಾಗಿ ಸಂಪೂರ್ಣವಾಗಿ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಆ ಕುರಿತು ಜರುಗಿಸಿದ ಕ್ರಮಗಳೇನು;

ಆ) ಸದರಿ ಸೇತುವೆಯನ್ನು ದುರಸ್ತಿಗೊಳಿಸಿ ಎಲ್ಲಾ ವಾಹನಗಳ ಸಂಚಾರಕ್ಕೆ ಅನುಕೂಲ ಮಾಡಿಕೊಡುವ ಕುರಿತು ಸಕಾಲಿಕ ಯೋಜನೆಯನ್ನು ಸರ್ಕಾರದವರು ಕೈಗೊಳ್ಳುವರೆ; ದುಸ್ಥಿತಿಯಲ್ಲಿರುವ ರಾಜ್ಯ ಹೆದ್ದಾರಿಗಳನ್ನು ಕೂಡಲೇ ದುರಸ್ತಿಗೊಳಿಸಲು ಕ್ರಮ ಕೈಗೊಳ್ಳುವರೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿದೆ, ರಸ್ತೆಗಳ ದುರಸ್ತಿಯನ್ನು ಮಾಡಲಾಗಿದ್ದು, ರಸ್ತೆಯನ್ನು ವಾಹನ ಸಂಚಾರಕ್ಕೆ ಯೋಗ್ಯ ರೀತಿಯಲ್ಲಿ ಇಡಲಾಗಿದೆ.

ಆ) ಪಾಣೆ ಮಂಗಳೂರು ಸೇತುವೆಯನ್ನು ದುರಸ್ತಿಗೊಳಿಸಲಾಗಿದ್ದು, ದಿನಾಂಕ 20-11-2002 ರಿಂದ ಎಲ್ಲಾ ವಾಹನಗಳ ಸಂಚಾರದ (ಭಾರಿ ವಾಹನಗಳನ್ನು ಹೊರತುಪಡಿಸಿ) ವ್ಯವಸ್ಥೆಯನ್ನು

ಮಾಡಲಾಗಿದೆ. ಹೊಸ ಸೇತುವೆಯ ನಿರ್ಮಾಣವನ್ನು ಫೆಬ್ರವರಿ 2003 ರಲ್ಲಿ ಪೂರ್ಣಗೊಳಿಸಲಾಗುವುದು.

ಬೆಳ್ತಂಗಡಿ ತಾಲ್ಲೂಕಿನ ಅರಣ್ಯ ಭೂಮಿಯಲ್ಲಿ ನಿರ್ಮಿಸಿರುವ ಸರ್ಕಾರಿ ಶಿಕ್ಷಣ ಸಂಸ್ಥೆಗಳು

1983(2426) - ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನ ಹಲವಾರು ಸರ್ಕಾರಿ ಶಿಕ್ಷಣ ಸಂಸ್ಥೆಗಳು ಅರಣ್ಯ ಭೂಮಿಯಲ್ಲಿ ನಿರ್ಮಿಸಿರುವುದನ್ನು ಸರ್ಕಾರ ದಾಖಲಿಸಿದೆಯೇ? ಹೌದಾದಲ್ಲಿ, ಆ ಕುರಿತಾದ ವಿವರಗಳೇನು?

ಮತ್ತು

ಆ) ಅಂತಹ ಎಷ್ಟು ಸರ್ಕಾರಿ ಶಿಕ್ಷಣ ಸಂಸ್ಥೆಗಳು ಬೆಳ್ತಂಗಡಿ ತಾಲ್ಲೂಕಿನಲ್ಲಿವೆ? ಎಲ್ಲೆಲ್ಲಿ ಇವೆ. (ವಿವರ ನೀಡುವುದು)

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಮತ್ತು ಆ) ಹೌದು.

ವಿವರಗಳು ಈ ಕೆಳಕಂಡಂತಿವೆ.

1) ಕಳಂಜ ಗ್ರಾಮದ ಸರ್ವೆ ನಂಬರ್ 309ರಲ್ಲಿ ನಿಡ್ಲೆ ವಿಸ್ತಿತ ಅರಣ್ಯ ಕ್ಷೇತ್ರ II ರಲ್ಲಿ 3.24 ಹೆಕ್ಟೇರ್ ಪ್ರದೇಶದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಪ್ರೌಢಶಾಲೆ ಕಳಂಜ ಇರುತ್ತದೆ.

2) ನಿಡ್ಲೆ ಗ್ರಾಮದ ಸರ್ವೆ ನಂಬರ್ 297.1 ರಲ್ಲಿ ನಿಡ್ಲೆ ವಿಸ್ತತ ಅರಣ್ಯ ಕ್ಷೇತ್ರ I ರಲ್ಲಿ 12 ಹೆಕ್ಟೇರ್ ಪ್ರದೇಶದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಪ್ರೌಢಶಾಲೆ - ನಿಡ್ಲೆ ಇರುತ್ತದೆ.

3) ಚಾರ್ಮಾಡಿ ಗ್ರಾಮದ ಸರ್ವೆ ನಂಬರ್ 197.1 ರಲ್ಲಿ ಚಾರ್ಮಾಡಿ - ಕನಪ್ಪಾಡಿ ವಿಸ್ತತ ಅರಣ್ಯ ಕ್ಷೇತ್ರ 1 ರಲ್ಲಿ 0.06 ಹೆಕ್ಟೇರ್ ಪ್ರದೇಶದಲ್ಲಿ ಜಿಲ್ಲಾ ಪಂಚಾಯತ್‌ನ ಅಂಗನವಾಡಿ ಕಟ್ಟಡ ಇರುತ್ತದೆ.

4) ಕಡಿರುದ್ಯಾವರ ಗ್ರಾಮದ ಸರ್ವೆ ನಂಬರ್ 201.11 ರಲ್ಲಿ ಚಾರ್ಮಾಡಿ - ಕನಪ್ಪಾಡಿ ವಿಸ್ತತ ಅರಣ್ಯ ಕ್ಷೇತ್ರ IIIರಲ್ಲಿ 0.04 ಹೇಕ್ಟೇರ್ ಪ್ರದೇಶದಲ್ಲಿ ಜಿಲ್ಲಾ ಪಂಚಾಯತ್‌ನ ಅಂಗನವಾಡಿ ಕಟ್ಟಡ ಇರುತ್ತದೆ.

ಪಹಣಿ ಪತ್ರಿಕೆಯ ವಿತರಣೆಯನ್ನು ಹೋಬಳಿ ಕೇಂದ್ರಗಳಿಗೆ ವಿಸ್ತರಿಸುವುದು

1984(2428) - ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಂದಾಯ ಇಲಾಖೆಯ ಪಹಣಿ ಪತ್ರಿಕೆಯು ಸಂಪೂರ್ಣವಾಗಿ ಗಣಕೀಕರಣಗೊಂಡಿದ್ದು, ತಾಲ್ಲೂಕು ಕೇಂದ್ರಗಳಲ್ಲಿ ಮಾತ್ರ ಅದನ್ನು ವಿಸ್ತರಿಸುವ ಕಾರಣದಿಂದಾಗಿ ಗ್ರಾಮೀಣ ರೈತರು ತೊಂದರೆಗೆ ಒಳಗಾಗಿರುವುದು ನಿಜವಲ್ಲವೇ; ಹಾಗಿದ್ದಲ್ಲಿ ಹೋಬಳಿ ಮಟ್ಟದಲ್ಲಿಯೂ ಪಹಣಿ ಪತ್ರಿಕೆಗಳನ್ನು ವಿತರಿಸುವ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದೇ;